ಅಸಲು ದಾವೆ ನಂ.12/2020 ಪಿ.ಡಬ್ಲೂಃ 3

ದಿನಾಂಕಃ 05/03/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು 3, 4, 9 ಹಾಗೂ 10 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್.ಹೆಚ್.ಆರ್. ವಕೀಲರಿಂದ

1. ನನಗೆ 3 ನೇ ಪ್ರತಿವಾದಿ ವೆಂಕಟೇಶ ಗೊತ್ತು. ಆತನ ತಾಯಿಯ ಹೆಸರು ಜವರಮ್ಮ ಉಃ ಅಕ್ಕಯ್ಯಮ್ಮ ಎಂದರೆ ನನಗೆ ಗೊತ್ತಿಲ್ಲ. ಆತನ ತಾಯಿ ಜೀವಂತ ಇದ್ದರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ವಾದಿ ಮೂಡ್ಲಿಗೌಡರ ತಂದೆ ನನಗೆ ಗೊತ್ತು. ಅವರು ಬೆಮ್ಮತ್ತಿ ಗ್ರಾಮದವರು. 3 ನೇ ಪ್ರತಿವಾದಿ ವೆಂಕಟೇಶರವರದ್ದು ಕೂಡ ಬೆಮ್ಮತ್ತಿ ಗ್ರಾಮ. ವೆಂಕಟೇಶರವರ ಅಣ್ಣತಮ್ಮಂದಿರ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ವಾದಿ ಮೂಡ್ಲಿಗೌಡರ ಅಣ್ಣತಮ್ಮಂದಿರೆಂದರೆ ಹೆಳವೇಗೌಡ, ಕರೀಗೌಡ ಹಾಗೂ ಇನ್ನಿಬ್ಬರು ಅಣ್ಣತಮ್ಮಂದಿರ ಹೆಸರು ನನಗೆ ಗೊತ್ತಿಲ್ಲ. ಮೂಡ್ಲಿಗೌಡನ ಅಜ್ಜನ ಹೆಸರು ಗೊತ್ತಿಲ್ಲ. ಆತನಿಗೆ ಎಷ್ಟು ಜನ ಮಕ್ಕಳು ಅವರು ಯಾರು ಯಾರೆಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ವೆಂಕಟೇಶ ಮತ್ತು ಕರೀಗೌಡ ದಾಖಲಿಸಿರುತ್ತಾರೆ. ವೆಂಕಟೇಶ ಯಾವ ಕಾರಣಕ್ಕಾಗಿ ಈ ದಾವೆ ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ವಿದ್ಯಾಮಾನಗಳು ನನಗೆ ಗೊತ್ತಿಲ್ಲ. 1 ನೇ ವಾದಿ ಮೂಡ್ಲಿಗೌಡ ನನ್ನನ್ನು ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ. ಅವರು ಜಮೀನು ನನ್ನ ಸ್ವಾಧೀನದಲ್ಲಿದೆ ಆ ವಿಷಯವನ್ನು ನ್ಯಾಯಾಲಯದಲ್ಲಿ ಹೇಳು ಎಂದು ಕರೆದುಕೊಂಡು ಬಂದಿದ್ದಾರೆ. ದಾವಾ ಸ್ವತ್ತು ನನಗೆ ಗೊತ್ತು. ಅದರ ಒಟ್ಟು ವಿಸ್ತೀರ್ಣ 7 ಎಕರೆ 16 ಗುಂಟೆ. ಅದರ ಚೆಕ್ಕು ಬಂಧಿ ಪೂರ್ವಕ್ಕೆ ಚೆಲುವೇಗೌಡ ಹಾಗೂ ವಗೈರೆಯವರ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ತಿಮ್ಮೇಗೌಡರ ಜಮೀನು ಎಂದರೆ ಸರಿ. ಉತ್ತರಕ್ಕೆ ಮಾದನೂರು ಗೋಮಾಳ ಎಂದರೆ ಸರಿಯಲ್ಲ ನಮ್ಮದೇ ಜಮೀನು ಇರುತ್ತದೆ. ದಕ್ಷಿಣಕ್ಕೆ ಕುಳ್ಳನ ಅಪ್ಪಾಜಿಗೌಡರ ಜಮೀನು ಎಂದರೆ ಸರಿ. ನಿಶಾನೆ ಪಿ-16 ರ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿ 3 ವೆಂಕಟೇಶ, ಪಾಪೇಗೌಡ, ಸ್ವಾಮಿಗೌಡ, ಲಲಿತಮ್ಮ ಕೋಂ ವಸಂತಕುಮಾರರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಅವರ ಹೆಸರಿನಲ್ಲಿ ಪೌತಿ ಆಧಾರದ ಮೇಲೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ. ನಿಶಾನೆ ಪಿ-16 ರಲ್ಲಿ ಬರೆದಿರುವ ವಿಷಯಗಳು ಸರಿಯಾಗಿರುತ್ತವೆ. ನನ್ನ ಜಮೀನಿನ ಸ.ನಂ.11. ಅದರ ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ. ಪಹಣಿ ಪತ್ರಿಕೆಯಲ್ಲಿ ಹೆಸರುಗಳನ್ನು ನಮೂದು ಮಾಡುವ ಮೊದಲು ಸ್ವಾಧೀನವನ್ನು ಸ್ಥಿರೀಕರಿಸಿಕೊಂಡು ಹೆಸರುಗಳನ್ನು ನಮೂದು ಮಾಡುತ್ತಾರೆ ಎಂದರೆ ಸರಿ. ಆ ಪ್ರಕಾರವಾಗಿ ಹೆಣ್ಣೂರು ಕೊಂಗಳಲೆ ಗ್ರಾಮದ ದಾವಾ ಸ್ವತ್ತುಗಳನ್ನೂ ಸಹ ನಮೂದು ಮಾಡಿರುತ್ತಾರೆ ಎಂದರೆ ಸರಿ.

2. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 3 ನೇ ಪ್ರತಿವಾದಿಯ ತಾಯಿ ನರಸಿಂಹೇಗೌಡರ ತಂದೆಯ ವಿರುದ್ದ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತು. ಈಗ ತೋರಿಸಲಾದ ಓ.ಎಸ್.ನಂ.254/1995 ರ ತೀರ್ಪು ಹಾಗೂ ಡಿಕ್ರಿಯ ಪ್ರತಿಯನ್ನು ತೋರಿಸಲಾಗಿ ಅದನ್ನು ಸಾಕ್ಷಿದಾರರು ಒಪ್ಪಿದ್ದರಿಂದ ಅದನ್ನು **ನಿಶಾನೆ ಡಿ-1 ಮತ್ತು 2** ಎಂದು ಗುರುತಿಸಲಾಯಿತು. ಹೆಣ್ಣೂರು ಕೊಂಗಳಲೆ ಗ್ರಾಮದ ದಾವಾ ಸ.ನಂ.12 ಮೂಲತಃ ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ಮೂಲತಃ ಜವರಮ್ಮ ಉಃ ಅಕ್ಕಯ್ಯಮ್ಮರವರ ತಂದೆ ಕಾಳೇಗೌಡರವರಿಗೆ ಸೇರಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾಳೇಗೌಡರು ಜೀವಂತ ಇರುವವರೆಗೆ ದಾವಾ ಸ್ವತ್ತನ್ನು ಅನುಭೋಗಿಸಿಕೊಂಡು ಬರುತ್ತಿದ್ದು ಎಂದರೆ ನನಗೆ ಗೊತ್ತಿಲ್ಲ. ಆತನ ಮರಣದ ನಂತರ ಆ ಆತನ ಹೆಂಡತಿ ಸಣ್ಣಮ್ಮ ಹಾಗೂ ಮಗಳಾದ ಜವರಮ್ಮ ಉಃ ಅಕ್ಕಯ್ಯಮ್ಮನಿಗೆ ಜಮೀನಿನ ಸ್ವಾಧೀನ ಬಂದಿತ್ತು ಎಂದರೆ ಸರಿ. ಆ ಪ್ರಕಾರವಾಗಿ ಸಣ್ಣಮ್ಮನ ಹೆಸರಿಗೆ ಖಾತೆ ವರ್ಗಾವಣೆಯಾಗಿತ್ತು ಎಂದರೆ ಸರಿ. ನಂತರ ಅಕ್ಕಯ್ಯಮ್ಮ ಹೆಸರಿಗೆ ಖಾತಾ ವರ್ಗಾವಣೆಯಾಗಿತ್ತು ಎಂದರೆ ಸರಿ. ನಿಶಾನೆ ಪಿ-8 ರಿಂದ 11 ಮತ್ತು 13 ರ ವರೆಗಿನ ಪಹಣಿ ಪತ್ರಿಕೆಗಳು ಸಣ್ಣಮ್ಮ ಹಾಗೂ ಅವರ ಮಗಳಾದ ಜವರಮ್ಮ ಉಃ ಅಕ್ಕಯ್ಯಮ್ಮರವರಿಗೆ ಬದಲಾಗಿರುತ್ತದೆ ಎಂದರೆ ಸರಿ. ನಿಶಾನೆ ಪಿ-8 ರಿಂದ 11 ಮತ್ತು 13 ರಲ್ಲಿ ಬರೆದಿರುವ ವಿಷಯಗಳು ಸರಿಯಾಗಿರುತ್ತವೆ ಎಂದರೆ ಸರಿ. ತದನಂತರ ಆ ಜಮೀನು ಜವರಮ್ಮ ಉಃ ಅಕ್ಕಯ್ಯಮ್ಮನ ಮಕ್ಕಳಾದ ಪ್ರತಿವಾದಿಗಳ ಹೆಸರಿನಲ್ಲಿ ಸ್ವತ್ತು ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಅದರಂತೆ ನಿಶಾನೆ ಪಿ-16 ರಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಆ ಪ್ರಕಾರವಾಗಿ ಪ್ರತಿವಾದಿಗಳಿಗೆ ದಾವಾ ಸ್ವತ್ತು ಸೇರಬೇಕು ಎಂದರೆ ಸರಿ. ಪಹಣಿ ಪತ್ರಿಕೆಗಳ ಪ್ರಕಾರ ದಾವಾ ಸ್ವತ್ತು ಪ್ರತಿವಾದಿಗಳ ಹೆಸರಿನಲ್ಲಿರುತ್ತವೆ ಹಾಗೂ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು 1 ನೇ ವಾದಿ ಮೂಡ್ಲಿಗೌಡ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ. ಅವರಿಗೆ ಅನಕೂಲ ಮಾಡಲು ಸಾಕ್ಷಿ ನುಡಿಯಲು ನಾನು ಬಂದಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
(ನಾಗೇಶ ಮೂರ್ತಿ ಬಿ.ಕೆ.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು.